**ಪ್ಯಾರಾ ಮೆಡಿಕಲ್ ಬೋರ್ಡ್**

**2022-23 ನೇ ಸಾಲಿಗೆ ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಿರುತ್ತಾರೆ.**

1. ಕೊಟ್ಟಿರುವ ಮಾಹಿತಿಯು ಅಪೂರ್ಣವೆಂದು ಕಂಡುಬಂದಲ್ಲಿ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
2. ಕೊಟ್ಟಿರುವ ಮಾಹಿತಿಯು ತಪ್ಪು ಎಂದು ಕಂಡುಬಂದಲ್ಲಿ ಅರ್ಜಿದಾರರ ಪ್ರವೇಶವನ್ನು ತಕ್ಷಣ ರದ್ದುಗೊಳಿಸುವ ಹಕ್ಕು ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಇರುತ್ತದೆ.
3. ಎಲ್ಲಾ ಪ್ಯಾರಾ ಮೆಡಿಕಲ್ ಕೋರ್ಸ್‌ಗಳ ಪ್ರವೇಶಕ್ಕೆ ಗರಿಷ್ಠ ವಯೋಮಿತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಸೇವಾನಿರತರಿಗೆ 40 ವರ್ಷಗಳು, ಇತರರಿಗೆ 35 ವರ್ಷಗಳು ಮೀರಿರಬಾರದು.
4. ಕೋರ್ಸ್‌ಗಳ ವಿವರ:
    1. ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ
    2. ಡಿಪ್ಲೋಮಾ ಇನ್ ಮೆಡಿಕಲ್ ಇಮೇಜಿಂಗ್ ಟೆಕ್ನಾಲಜಿ
    3. ಡಿಪ್ಲೋಮಾ ಇನ್ ಹೆಲ್ತ್ ಇನ್ಸ್‌ಪೆಕ್ಟರ್
    4. ಡಿಪ್ಲೋಮಾ ಇನ್ ಮೆಡಿಕಲ್ ರೆಕಾರ್ಡ್ಸ್ ಟೆಕ್ನಾಲಜಿ
    5. ಡಿಪ್ಲೋಮಾ ಇನ್ ಡಯಾಲಿಸಿಸ್ ಟೆಕ್ನಾಲಜಿ
    6. ಡಿಪ್ಲೋಮಾ ಇನ್ ಆಪರೇಷನ್ ಥಿಯೇಟರ್ ಮತ್ತು ಅನಸ್ಥೇಶಿಯಾ ಟೆಕ್ನಾಲಜಿ
    7. ಡಿಪ್ಲೋಮಾ ಇನ್ ಆಪ್ಟಾಲ್ಮಿಕ್ ಟೆಕ್ನಾಲಜಿ
    8. ಡಿಪ್ಲೋಮಾ ಇನ್ ಡೆಂಟಲ್ ಮೆಕ್ಯಾನಿಕ್ಸ್
    9. ಡಿಪ್ಲೋಮಾ ಇನ್ ಡೆಂಟಲ್ ಹೈಜೀನ್

3. ಆಯ್ಕೆಯು ಸೆಂಟ್ರಲ್ ಕೌನ್ಸಿಲಿಂಗ್ ಮೂಲಕ ನಡೆಯುವುದರಿಂದ ಒಬ್ಬ ಅಭ್ಯರ್ಥಿಯು ಒಂದೇ ಒಂದು ಅರ್ಜಿಯನ್ನು ಮಾತ್ರ ಸಲ್ಲಿಸಿ, 09 ಕೋರ್ಸ್‌ಗಳಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಿಕೊಳ್ಳಲು ಕೌನ್ಸಿಲಿಂಗ್‌ನಲ್ಲಿ ಅವಕಾಶವಿರುತ್ತದೆ.
4. ಡಿಪ್ಲೋಮಾ ಇನ್ ಮೆಡಿಕಲ್ ರೆಕಾರ್ಡ್ಸ್ ಹೊರತುಪಡಿಸಿ ಇತರೆ ಎಲ್ಲಾ ಕೋರ್ಸ್‌ಗಳಿಗೂ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಿರಬೇಕು ಮತ್ತು ವಿಜ್ಞಾನ (Physics, Chemistry & Biology/Zoology/Botany) ವಿಷಯಗಳಲ್ಲಿ ಅಭ್ಯಾಸ ಮಾಡಿರಬೇಕು. ಇವರಿಗೆ ಕೋರ್ಸ್‌ನ ಅವಧಿ 02 ವರ್ಷ + 03 ತಿಂಗಳು Internship ಗಳಾಗಿರುತ್ತವೆ.

5. ಮೆಡಿಕಲ್ ರೆಕಾರ್ಡ್ಸ್ ಕೋರ್ಸಿಗೆ ದ್ವಿತೀಯ ಪಿಯುಸಿ ಮತ್ತು ಅದಕ್ಕೆ ಸಮಾನಾಂತರ ವಿದ್ಯಾಭ್ಯಾಸವನ್ನು ಯಾವುದೇ ವಿಷಯವನ್ನು (ಆರ್ಟ್ಸ್ / ಸೈನ್ಸ್(PCMC/PCME) / ಕಾಮರ್ಸ್) ತೆಗೆದುಕೊಂಡು ತೇರ್ಗಡೆಯಾಗಿರಬೇಕು. ಇವರಿಗೆ ಕೋರ್ಸ್‌ನ ಅವಧಿ 02 ವರ್ಷ + 03 ತಿಂಗಳು Internship ಗಳಾಗಿರುತ್ತವೆ.
6. ಎಸ್.ಎಸ್.ಎಲ್.ಸಿ. ಪಾಸಾದ ಅಭ್ಯರ್ಥಿಗಳು ಎಲ್ಲಾ ಕೋರ್ಸ್‌ಗಳಿಗೂ ಅರ್ಹರಿರುತ್ತಾರೆ. ಇವರಿಗೆ ಕೋರ್ಸ್‌ನ ಅವಧಿ 03 ವರ್ಷ + 03 ತಿಂಗಳು Internship ಗಳಾಗಿರುತ್ತವೆ.
7. ಅರ್ಜಿದಾರರು ಕನಿಷ್ಠ 07 ವರ್ಷ ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡಿರಬೇಕು.
8. ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಯು ಕೆಳಗಿನ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ.
   i) ಇತ್ತೀಚಿನ ಭಾವಚಿತ್ರದಲ್ಲಿ ಕಡ್ಡಯಾವಾಗಿ ಅಭ್ಯರ್ಥಿಯ ಹೆಸರು ಮುದ್ರಿಸಿರಬೇಕು ಫೈಲ್ JPG format ನಲ್ಲಿ 50KB ಗಿಂತ ಕಡಿಮೆ ಇರಬೇಕು.
   ii) ಬಿಳಿ ಹಾಳೆಯಲ್ಲಿ ಅಭ್ಯರ್ಥಿಯ ಸಹಿ ಫೈಲ್ JPG format ನಲ್ಲಿ 20KB ಗಿಂತ ಕಡಿಮೆ ಇರಬೇಕು.
   iii) ಅಂಗವಿಕಲ ಕೋಟಾದಡಿಯಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ದೇಹದ ಶೇ.60%ರೊಳಗೆ ಅಂಗವಿಕಲತೆ ಹೊಂದಿರುವವರು ಮಾತ್ರ ಅರ್ಹರಾಗಿರುತ್ತಾರೆ. ಈ ಕೋಟಾದಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಿಂದ ಪಡೆದ ವೈದ್ಯಕೀಯ ದೃಢೀಕರಣ ಪತ್ರವನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಮೂಲ ಪ್ರಮಾಣ ಪತ್ರವನ್ನು ಕೌನ್ಸಿಲಿಂಗ್ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
   iv) ಹೈದ್ರಾಬಾದ್-ಕರ್ನಾಟಕ ಪ್ರಾಂತ್ಯದ ಶಿಕ್ಷಣಾರ್ಥಿಗಳಿಗೆ ರಾಜ್ಯ ವ್ಯಾಪ್ತಿ ಅರೆ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 8%ರಷ್ಟು ಹಾಗೂ ಹೈದ್ರಾಬಾದ್-ಕರ್ನಾಟಕ ಪ್ರಾಂತ್ಯದ ಅರೆ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 70%ರಷ್ಟು ಸೀಟುಗಳನ್ನು ಹೈದ್ರಾಬಾದ್-ಕರ್ನಾಟಕ ಭಾಗದ ಶಿಕ್ಷಣಾರ್ಥಿಗಳಿಗೆ ಮೀಸಲಿಡಲಾಗುವುದು. (ಕಲಬುರಗಿ, ಬಳ್ಳಾರಿ, ರಾಯಚೂರು, ಕೊಪ್ಪಳ, ಬೀದರ್ ಮತ್ತು ಯಾದಗಿರಿ)
   v) ಹೈದ್ರಾಬಾದ್-ಕರ್ನಾಟಕ(ಕಲ್ಯಾಣ-ಕರ್ನಾಟಕ) ಮೀಸಲು ಕೋಟಾಲ್ಲಿ ಆಯ್ಕೆ ಬಯಸಿದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ದೃಢೀಕರಣ ಪತ್ರವನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು ಹಾಗೂ ಮೂಲ ಪ್ರಮಾಣ ಪತ್ರವನ್ನು ಕೌನ್ಸಿಲಿಂಗ್ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
   vi) ಮೂಲ ಅಂಕ ಪಟ್ಟಿ, ವರ್ಗಾವಣೆ ಪ್ರಮಾಣ ಪತ್ರ, ಮೀಸಲಾತಿ ದೃಡೀಕರಣ ಪತ್ರ ಹಾಗೂ ಹೈದ್ರಾಬಾದ್ ಕರ್ನಾಟಕ ಮೀಸಲಾತಿ ದೃಡೀಕರಣ ಪತ್ರಗಳು JPG format ನಲ್ಲಿ 200KB ಗಿಂತ ಕಡಿಮೆ ಇರಬೇಕು
   vii) ಕರ್ನಾಟಕದಲ್ಲಿ 7 ವರ್ಷ ವಿದ್ಯಾಭ್ಯಾಸ ಮಾಡಿರುವ ಬಗ್ಗೆ ಶಾಲೆ /ಕಾಲೇಜಿನಿಂದ ಪಡೆದ ದೃಡೀಕರಣ ಪತ್ರವನ್ನು PDF format 300KB ಗಿಂತ ಕಡಿಮೆ ಇರಬೇಕು
   viii) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತ ಗಂಗೋತ್ರಿ, ಮೈಸೂರು ರಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳು ಆಯ್ಕೆಗೆ ಅರ್ಹರಿರುವುದಿಲ್ಲ

9. **ಅರ್ಜಿ ಶುಲ್ಕ:** ಸಾಮಾನ್ಯ ಅಭ್ಯರ್ಥಿಗಳಿಗೆ ಪ್ರತಿ ಅರ್ಜಿಗೆ ರೂ.400/- ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ/ಪ್ರವರ್ಗ-1 ರ ಅಭ್ಯರ್ಥಿಗಳಿಗೆ ರೂ.250/- ಅರ್ಜಿ ಶುಲ್ಕವನ್ನು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರವೇ ಡೆಬಿಟ್ / ಕ್ರೆಡಿಟ್ ಕಾರ್ಡ್ / ನೆಟ್ ಬ್ಯಾಂಕಿಂಗ್ ಮೂಲಕ ಮಾತ್ರ ಪಾವತಿಸುವುದು.

10. ಕೋರ್ಸ್‌ಗಳಿಗೆ ಪ್ರವೇಶ ಪಡೆದವರು ಪ್ಯಾರಾ ಮೆಡಿಕಲ್ ಬೋರ್ಡ್‌ನ ನಿಯಮಾವಳಿಗಳಿಗೆ ಬದ್ಧರಾಗಿರಬೇಕು.

11. ಅರ್ಹ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನದ / ಕೌನ್ಸಿಲಿಂಗ್ ತಿಳುವಳಿಕೆ ಸಂದೇಶ ಕಳುಹಿಸಲಾಗುವುದು.

12. ಕೌನ್ಸಿಲಿಂಗ್‌ಗೆ ಹಾಜರಾಗುವ ಸಮಯದಲ್ಲಿ ಎಲ್ಲಾ ದಾಖಲೆಗಳ ಮೂಲ ಪ್ರಮಾಣಪತ್ರಗಳನ್ನು ಸಲ್ಲಿಸುವುದು. ತಪ್ಪಿದಲ್ಲಿ ಕೌನ್ಸಿಲಿಂಗ್‌ಗೆ ಅವಕಾಶ ನೀಡಲಾಗುವುದಿಲ್ಲ.

13. ಸಂದರ್ಶನದ ಸ್ಥಳ ಮತ್ತು ದಿನಾಂಕವನ್ನು ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

14. ಕೌನ್ಸಿಲಿಂಗ್/ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲೇ ಬರಬೇಕಾಗಿರುತ್ತದೆ.

15. ಅರ್ಜಿ ಸಲ್ಲಿಸಿದ/ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳಿಗೆ ಕಾಲೇಜ್/ಕೋರ್ಸ್/ಸೀಟ್ ದೊರಕಿಸಿ ಕೊಡುವ ಖಾತ್ರಿಯನ್ನು ಬೋರ್ಡ್ ನೀಡುವುದಿಲ್ಲ.

16. ಸಂದರ್ಶನದ ವೇಳೆಯಲ್ಲಿ ಅಭ್ಯರ್ಥಿಯು ಈ ಕೆಳಕಂಡ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಬೇಕು, ತಪ್ಪಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಆಯ್ಕೆಯನ್ನು ತಿರಸ್ಕರಿಸಲಾಗುವುದು.
    1. ಮೂಲ ಅಂಕ ಪಟ್ಟಿ. (Original Marks Cards)
    2. ವರ್ಗಾವಣೆ ಪ್ರಮಾಣ ಪತ್ರ. (Original Transfer Certificate)
    3. ಮೀಸಲಾತಿ ದೃಡೀಕರಣ. (Category Certificate)
    4. 01 ರಿಂದ 10 ನೇ ತರಗತಿ ಅಥವಾ ಪಿಯುಸಿಯವರೆಗೆ ಕನಿಷ್ಟ 07 ವರ್ಷಗಳು ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡಿರುವ ಬಗ್ಗೆ ಶಾಲೆ /ಕಾಲೇಜಿನಿಂದ ಪಡೆದ ದೃಡೀಕರಣ ಪತ್ರ. (Original Study Certifiicate)
    5. ಹೈದ್ರಾಬಾದ್ ಕರ್ನಾಟಕ ಮೀಸಲಾತಿ ದೃಡೀಕರಣ ಪತ್ರ (**Not below the rank of Thasildar**).

17. ಒಂದು ವೇಳೆ ಆನ್‌ಲೈನ್ ಮೂಲಕ ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸುವುದಾದರೆ, ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ವಲಯವಾರು ನಿಗದಿತ ಕೇಂದ್ರಗಳಲ್ಲಿ ಪರಿಶೀಲಿಸಿ, ನಂತರ ವಿದ್ಯಾರ್ಥಿಗಳು ಇಚ್ಚಿಸುವ ಕೋರ್ಸ್ ಮತ್ತು ಕಾಲೇಜುಗಳ ಆಯ್ಕೆಯನ್ನು ಆನ್‌ಲೈನ್‌ನಲ್ಲಿ ನಮೂದಿಸಲು ಅವಕಾಶ ನೀಡಲಾಗುವುದು.

18. **ಆಯ್ಕೆ ಪ್ರಕ್ರಿಯೆ**: MERIT- CUM-CATEGORY ಆದಾರದ ಮೇಲೆ ನಡೆಸಲಾಗುವುದು.

19. ಪಿಯುಸಿ ವಿದ್ಯಾರ್ಥಿಗಳಿಗೆ ಆಯ್ಕೆ ಪ್ರಕ್ರಿಯೆಯಲ್ಲಿ ಮೊದಲ ಆದ್ಯತೆ ನೀಡಲಾಗುವುದು.

20. ಪ್ರವೇಶಾತಿ ಪಡೆದ ವಿದ್ಯಾರ್ಥಿಯು 7 ದಿನಗಳೊಳಗೆ ಕಾಲೇಜುಗಳಲ್ಲಿ ಮೂಲದಾಖಲಾತಿಗಳನ್ನು ಸಲ್ಲಿಸಿ ನೊಂದಣಿ ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಪ್ರವೇಶಾತಿಯನ್ನು ತಿರಸ್ಕರಿಸಲಾಗುವುದು.